**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

ಸಂಖ್ಯೆ : ಆಇ 10 ಬಿಪಿಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ:257,ವಿಧಾನ ಸೌಧ,
ಬೆಂಗಳೂರು, ದಿನಾಂಕ:13-10-2017.

# ಸುತ್ತೋಲೆ

**ವಿಷಯ** :- 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಸಾಮಾನ್ಯ ಸೂಚನೆಗಳು – ವೆಚ್ಚ ಅಂದಾಜುಗಳ ತಯಾರಿಕೆಯ ಬಗ್ಗೆ (ವೇತನಗಳನ್ನು ಹೊರತುಪಡಿಸಿ)

* * *

2018-19ನೇ ಸಾಲಿಗೆ ವೆಚ್ಚ ಅಂದಾಜುಗಳ ತಯಾರಿಕೆಯ ಬಗ್ಗೆ ಮಾರ್ಗಸೂಚಿ / ಸೂಚನೆಗಳನ್ನು ಈ ಕೆಳಕಂಡ ಕಂಡಿಕೆಗಳಲ್ಲಿ ಹೊರಡಿಸಲಾಗಿದೆ:-

## ಎ. ಸಾಮಾನ್ಯ ಮಾರ್ಗಸೂಚಿಗಳು:-

ಅ) 2018–19ನೇ ವರ್ಷದ ಆಯವ್ಯಯ ಕಾರ್ಯವನ್ನು ನಿಯಂತ್ರಿಸುವ ಸಲುವಾಗಿ ದಿನಸೂಚಿಯನ್ನು ಈ ಸುತ್ತೋಲೆಗೆ ಲಗತ್ತಿಸಲಾಗಿದೆ **(ಅನುಬಂಧ-1)**. ಆಯವ್ಯಯ ಕಾರ್ಯಗಳಿಗೆ **ಮೊದಲ ಆದ್ಯತೆ** ನೀಡಿ ನಿಗದಿತ ದಿನಾಂಕ ಅಂತ್ಯಗೊಳ್ಳುವವರೆಗೂ ಕಾಯದೇ, ಆಯವ್ಯಯ ಅಂದಾಜುಗಳು ಸಿದ್ಧವಾದ ಕೂಡಲೇ ಕಳುಹಿಸುವ ಹಾಗೆ ನೋಡಿಕೊಳ್ಳುವಂತೆ ಅಂದಾಜು ತಯಾರಿಸುವ ಅಧಿಕಾರಿಗಳನ್ನು ವಿನಂತಿಸಲಾಗಿದೆ. ಆಯವ್ಯಯ ಅಂದಾಜುಗಳನ್ನು ಇಲಾಖೆಗಳು ಸರ್ಕಾರದ ಉಪ ಕಾರ್ಯದರ್ಶಿ (ಆ ಮತ್ತು ಸಂ), ಆರ್ಥಿಕ ಇಲಾಖೆ ರವರ ವಿಳಾಸಕ್ಕೆ ಹೆಸರಿಸಿ ಆರ್ಥಿಕ ಇಲಾಖೆಗೆ ಕಳುಹಿಸುವುದು. ಆಂತರಿಕ ಆರ್ಥಿಕ ಸಲಹೆಗಾರರುಗಳನ್ನು ಹೊಂದಿರುವ ಇಲಾಖೆಗಳು ಸಂಬಂಧಿಸಿದ ಆಂತರಿಕ ಆರ್ಥಿಕ ಸಲಹೆಗಾರರುಗಳ ಮೂಲಕ ಆಯವ್ಯಯ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

ಆ) ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ಅಂದಾಜು ತಯಾರಿಸುವ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ಸವಿವರ ಆಯವ್ಯಯ ಅಂದಾಜುಗಳನ್ನು ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಮತ್ತು ಆಂತರಿಕ ಆರ್ಥಿಕ ಸಲಹೆಗಾರರುಗಳಿಗೆ ಕಳುಹಿಸುವುದು. ನಂತರ ಇಲಾಖಾ ಮುಖ್ಯಸ್ಥರುಗಳು ಈ ಅಂದಾಜುಗಳನ್ನು ಪರಿಶೀಲಿಸಿ ಕ್ರೋಢೀಕೃತ ಅಂದಾಜುಗಳನ್ನು ತಮ್ಮ ಷರಾದೊಂದಿಗೆ ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರುಗಳ ಮುಖಾಂತರ ನಿಗದಿಪಡಿಸಿದ ದಿನಾಂಕಗಳಿಗಿಂತ ಮುಂಚಿತವಾಗಿ ಆರ್ಥಿಕ ಇಲಾಖೆಗೆ ಕಳುಹಿಸತಕ್ಕದ್ದು.

ಇ) ಸಾಕಷ್ಟು ಮುಂಚಿತವಾಗಿಯೇ ತಮ್ಮ ಅಧೀನ ಅಧಿಕಾರಿಗಳಿಂದ ಮಾಹಿತಿ ಪಡೆಯಲು ವಿಶೇಷ ವ್ಯವಸ್ಥೆಗಳನ್ನು ಮಾಡಿಕೊಂಡು ನಿಗದಿತ ನಮೂನೆಗಳಲ್ಲಿ ಎಲ್ಲಾ ವಿವರಗಳನ್ನೊಳಗೊಂಡಿರುವ ಕ್ರೋಢೀಕೃತ ಅಂದಾಜುಗಳ ಪ್ರತಿಯನ್ನು ಮಾತ್ರ ಆರ್ಥಿಕ ಇಲಾಖೆಗೆ ಕಳುಹಿಸಿಕೊಡಬೇಕೆಂದು ಎಲ್ಲಾ ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳನ್ನು ಕೋರಲಾಗಿದೆ. ತಮ್ಮ ಅಧೀನ ಅಧಿಕಾರಿಗಳಿಂದ ಸ್ವೀಕರಿಸಿರುವ ಅಂದಾಜುಗಳ ಕ್ರೋಢೀಕರಣ ಕಾರ್ಯವು ಸಂಬಂಧಿಸಿದ ಮುಖ್ಯ ನಿಯಂತ್ರಣಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಜವಾಬ್ದಾರಿಯಾಗಿದ್ದು, ಅವರುಗಳು ಯಾವುದೇ ಬಾಬ್ತು ಬಿಟ್ಟುಹೋಗದಂತೆ ನಿಗಾ ವಹಿಸತಕ್ಕದ್ದು.

ಬಿ. **ಜಮೆ ಅಂದಾಜುಗಳು:**

ದಿನಾಂಕ:13–10–2017ರ ಸುತ್ತೋಲೆ ಸಂಖ್ಯೆ: ಎಫ್‌ಡಿ 12 ಬಿಪಿಇ 2017ರಲ್ಲಿ ಈಗಾಗಲೇ ಈ ಸಂಬಂಧ ಸೂಚನೆಗಳನ್ನು ನೀಡಲಾಗಿರುತ್ತದೆ.

ಸಿ. **ವೆಚ್ಚ ಅಂದಾಜುಗಳು:–**

1. **ಸಾಮಾನ್ಯ:–**

ಮಂಜೂರಾತಿಗಳು ಮತ್ತು ವಾಸ್ತವಿಕ ಅಗತ್ಯಗಳಿಗುಣವಾಗಿ ನಿಖರವಾಗಿ ಮತ್ತು ತುಂಬಾ ಎಚ್ಚರಿಕೆಯಿಂದ ಎಲ್ಲಾ ವೆಚ್ಚದ ಅಂದಾಜುಗಳನ್ನು ತಯಾರಿಸತಕ್ಕದ್ದು. 2018-19ನೇ ಸಾಲಿನ ವೆಚ್ಚದ ಅಂದಾಜುಗಳನ್ನು ಹಿಂದಿನ ವರ್ಷಗಳ ವಾಸ್ತವಿಕಗಳು ಮತ್ತು 2017-18ನೇ ಸಾಲಿಗಾಗಿ ಅನುಮೋದನೆಗೊಂಡಿರುವ ಪೂರಕ ಅಂದಾಜುಗಳ ಆಧಾರದ ಮೇಲೆ ತಯಾರಿಸತಕ್ಕದ್ದು. ಸಹಾಯಧನಗಳು (ಇಂಧನ, ಆಹಾರ, ಹಾಲು, ಸಾರಿಗೆ ಇತ್ಯಾದಿ), ನಿರ್ವಹಣೆ (ಕಟ್ಟಡಗಳು, ರಸ್ತೆಗಳು, ಸೇತುವೆಗಳು, ವಸತಿ ನಿಲಯಗಳು ಇತ್ಯಾದಿ), ವಸತಿ ಶುಲ್ಕಗಳು (ವಸತಿ ನಿಲಯಗಳು), ಸಾಮಾಜಿಕ ಭದ್ರತೆ ಪಿಂಚಣಿ ಮುಂತಾದ ಎಲ್ಲಾ ತರಹದ ಬದ್ದಿತ ವೆಚ್ಚಗಳಿಗಾಗಿ ಅವಕಾಶವನ್ನು ಕಲ್ಪಿಸತಕ್ಕದ್ದು. ಸಂಬಂಧಪಟ್ಟ ಇಲಾಖೆಗಳು ಈ ಕುರಿತು ಅಂದಾಜುಗಳನ್ನು ಸಲ್ಲಿಸುವಾಗ ಫಲಾನುಭವಿಗಳ ಸಂಖ್ಯೆ, ಘಟಕ ದರ ಮುಂತಾದ ವಿವರಗಳನ್ನು ಒಳಗೊಂಡ ಲೆಕ್ಕಾಚಾರದ ಪಟ್ಟಿಯನ್ನು ಸಲ್ಲಿಸುವುದು. ಇವುಗಳನ್ನು 2018–19ನೇ ಸಾಲಿನ ಅಂದಾಜುಗಳೊಂದಿಗೆ ಸಲ್ಲಿಸತಕ್ಕದ್ದು. 2018–19ನೇ ಸಾಲಿನ ಅಂದಾಜುಗಳನ್ನು **ಅನುಬಂಧ–2** ರಲ್ಲಿನ ನಮೂನೆಯಂತೆ ಸಲ್ಲಿಸುವುದು. ಇವುಗಳೊಂದಿಗೆ ಈ ಕೆಳಕಂಡ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು:–

ಅ. ಉದ್ದೇಶ ಶೀರ್ಷಿಕೆಗಳಡಿ ಎಲ್ಲಾ ವೆಚ್ಚದ ಅಂದಾಜುಗಳನ್ನು ಸರಿಯಾಗಿ ತೋರಿಸತಕ್ಕದ್ದು. 2018–19ನೇ ಸಾಲಿಗೆ ಚಾಲ್ತಿಗೊಳಿಸಲಾದ ಸಾಮಾನ್ಯ ಉದ್ದೇಶ ಶೀರ್ಷಿಕೆಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ. ಪ್ರಸ್ತುತ ಆಯವ್ಯಯದಲ್ಲಿ ಪ್ರತಿಯೊಂದು ಯೋಜನೆಯ ಉದ್ದೇಶಿತ ಶೀರ್ಷಿಕೆಯಡಿ ಒದಗಿಸುವ ಆಯವ್ಯಯವನ್ನು ಎಷ್ಟೇ ಮೊತ್ತವನ್ನು ಒಳಗೊಂಡಿದ್ದರೂ ಒಂದು ಧನ ವಿನಿಯೋಗ ಘಟಕವೆಂದು ಪರಿಗಣಿಸಲಾಗಿದೆ. ಇದರಿಂದಾಗಿ 0.10 ಕೋಟಿ ರೂ. ಗಳಿಂದ 1.00 ಕೋಟಿ ರೂ. ವರೆಗಿನ ಅಂತರದಲ್ಲಿ ಪ್ರತಿಯೊಂದು ಮುಖ್ಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಹಳಷ್ಟು ಯೋಜನೆಗಳಿಗೆ ಎಡೆ ಮಾಡಿಕೊಟ್ಟಿದೆ. ಪೂರಕ ಅಂದಾಜುಗಳಲ್ಲಿ ಹೆಚ್ಚುವರಿ ಅನುದಾನ ಒದಗಿಸುವುದನ್ನು ಮತ್ತು ಮರುವಿನಿಯೋಗವನ್ನು ತಪ್ಪಿಸುವುದಕ್ಕಾಗಿ ಆಯವ್ಯಯದಲ್ಲಿ ಅನೇಕ ಉದ್ದೇಶಿತ ಶೀರ್ಷಿಕೆಗಳನ್ನು ಕಡಿಮೆ ಮಾಡಲು ಸರ್ಕಾರವು ನಿರ್ಧರಿಸಿದೆ. **ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಯಯೋಜನೆಗಳನ್ನು ಪುನರಾವಲೋಕಿಸಬೇಕೆಂದು ಮತ್ತು ಸಮಾನ ಉದ್ದೇಶವನ್ನು ಹೊಂದಿರುವ ಅಥವಾ ಹೆಚ್ಚಿನ ಹೊಂದಾಣಿಕೆಯಿರುವ ಉದ್ದೇಶಗಳನ್ನು ಹೊಂದಿರುವ ಯೋಜನೆಗಳನ್ನು ವಿಲೀನಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು. ಸಾಮಾನ್ಯವಾಗಿ 1.00 ಕೋಟಿ ರೂ.ಗಳಿಗಿಂತ ಕಡಿಮೆ ಮೊತ್ತವನ್ನೊಳಗೊಂಡಿರುವ Line item ಅನ್ನು 2018–19ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಸೇರಿಸಲಾಗುವುದಿಲ್ಲ.**

ಆ. ಅಗತ್ಯವಾಗಿ ಬೇಕಾಗಿರುವುದಕ್ಕಿಂತ ಹೆಚ್ಚು ಮೊತ್ತವನ್ನು ಆಯವ್ಯಯದಲ್ಲಿ ಸೇರಿಸಿರುವ ಕಾರಣದಿಂದಾಗಲೀ ಅಥವಾ ಆಯವ್ಯಯದಲ್ಲಿ ಉಪಬಂಧಿಸಲಾದ ಯೋಜನೆಗಳನ್ನು ಕಾರ್ಯಗತಗೊಳಿಸದೇ ಇರುವ ಕಾರಣದಿಂದಾಗಲೀ, ಗಮನಾರ್ಹವಾದ ಮೊಬಲಗನ್ನು ಈ ಹಿಂದೆ ಸರ್ಕಾರಕ್ಕೆ ಅಧ್ಯರ್ಪಿಸಿರುವ ಉದಾಹರಣೆಗಳು ಇವೆ. ಆರ್ಥಿಕ ವರ್ಷದ ಮೊದಲ ಮೂರು ತಿಂಗಳಿನಲ್ಲೇ ಇಲಾಖೆಗಳು ಮೂಲತಃ ನಿರೀಕ್ಷಿಸಿರದಂತಹ ಕೆಲವು ಬಾಬುಗಳಿಗೆ ಹೆಚ್ಚಿನ ನಿಧಿಗಳ ಏರ್ಪಾಟನ್ನು ಮಾಡಲು ಸರ್ಕಾರವನ್ನು ಕೇಳಿಕೊಂಡಿರುವ ಸಂದರ್ಭಗಳೂ ಇವೆ. ಕೇವಲ ಕೆಲವು ತಿಂಗಳುಗಳ ಅವಧಿಯಲ್ಲಿ ಇಡೀ ಆಯವ್ಯಯ ಅವಕಾಶದಲ್ಲಿ ಹೆಚ್ಚಿನ ಭಾಗವನ್ನು ಇಲಾಖೆಗಳು ಖರ್ಚು ಮಾಡಿ, ಹೆಚ್ಚಿನ ನಿಧಿಗಾಗಿ ಆರ್ಥಿಕ ಇಲಾಖೆಯನ್ನು ಕೋರಿರುವ ಉದಾಹರಣೆಗಳೂ ಸರ್ಕಾರದ ಗಮನಕ್ಕೆ ಬಂದಿದೆ. ಅಂತಹ ಸಂದರ್ಭಗಳನ್ನು ತಡೆಗಟ್ಟಿ,

ಆಯವ್ಯಯ ಅಂದಾಜುಗಳನ್ನು ಜಾಗರೂಕತೆಯಿಂದ, ಮುಂದಾಲೋಚನೆಯಿಂದ ತಯಾರಿಸುವುದು ಅಗತ್ಯವಾಗಿದೆ. ಆದ್ದರಿಂದ ಪ್ರಸ್ತಾವಗಳನ್ನು ಊಹಾತ್ಮಕ ಅಂದಾಜುಗಳ ಆಧಾರದ ಮೇಲೆ ಮಾಡದೇ, ಸಂಭಾವ್ಯ ಮತ್ತು ವಾಸ್ತವಿಕ ಅಗತ್ಯತೆಗಳ ಆಧಾರದ ಮೇಲೆ ತಯಾರಿಸಿರಬೇಕು. ಆರ್ಥಿಕ ವರ್ಷದ ಎಲ್ಲಾ ತಿಂಗಳೂ ಸಮನಾಗಿ ವೆಚ್ಚ ಮಾಡಬೇಕು ಮತ್ತು ಆರ್ಥಿಕ ವರ್ಷದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ವೆಚ್ಚವು ವಿಪರೀತವಾಗಿರಕೂಡದು. ಈ ರೀತಿ ಮಾಡುವುದರಿಂದ ಆಯವ್ಯಯ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತದ ಮತ್ತು ವಾಸ್ತವ ವೆಚ್ಚದ ನಡುವೆ ಬೃಹತ್ ಪ್ರಮಾಣದಲ್ಲಾಗುವ ವ್ಯತ್ಯಾಸಗಳನ್ನು ತಪ್ಪಿಸಿದಂತಾಗುತ್ತದೆ. ಆಯವ್ಯಯ ನಿಯಂತ್ರಣವನ್ನು ಖಜಾನೆಗಳ ಮೂಲಕ ಜಾರಿಗೊಳಿಸಿದೆ. ಆದ್ದರಿಂದ ವೆಚ್ಚದ ಮೇಲಿನ ಎಲ್ಲಾ ಬಾಬ್ತುಗಳನ್ನು ಸರಿಯಾದ ಲೆಕ್ಕ ಶೀರ್ಷಿಕೆಗಳಡಿ ವರ್ಗೀಕರಿಸತಕ್ಕದ್ದು. ಹಾಗೆ ವರ್ಗೀಕರಿಸದಿದ್ದಲ್ಲಿ, ಅಂತಹ ಬಿಲ್ಲುಗಳನ್ನು ಖಜಾನೆಗಳು ಮಾನ್ಯ ಮಾಡುವುದಿಲ್ಲ.

ಇ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಬಹಳಷ್ಟು ಇಲಾಖೆಗಳು **ಉಪ ಲೆಕ್ಕ ಶೀರ್ಷಿಕೆ '800–ಇತರೆ ವೆಚ್ಚಗಳು' ಹಾಗೂ ಉದ್ದೇಶಿತ ಲೆಕ್ಕ ಶೀರ್ಷಿಕೆ '059–ಇತರೆ ವೆಚ್ಚಗಳು'** ಅಡಿಯಲ್ಲಿ ವೆಚ್ಚಗಳನ್ನು ಕ್ರೋಢೀಕರಿಸಿ ವರ್ಗಿಕರಿಸಿರುವ ಪರಿಣಾಮವಾಗಿ ಇಲಾಖೆಯ ಯಾವ ನಿರ್ದಿಷ್ಟ ಬಾಬ್ತುಗಳಿಗೆ ವೆಚ್ಚವಾಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತಿಲ್ಲವೆಂದು ಉಲ್ಲೇಖಿಸಿದೆ. ಆದ್ದರಿಂದ ವೆಚ್ಚಗಳಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ, ಈ ರೀತಿ ವರ್ಗೀಕರಿಸುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಶಿಫಾರಸ್ಸು ಮಾಡಿದೆ. ಇದರ ಸಲುವಾಗಿ **ಅನುಬಂಧ–3** ರಲ್ಲಿ ವ್ಯಾಪಕವಾದ ಉದ್ದೇಶಿತ ಲೆಕ್ಕ ಶೀರ್ಷಿಕೆಗಳ ಪಟ್ಟಿ ನೀಡಲಾಗಿದೆ. **ಈ ಪಟ್ಟಿಯಲ್ಲಿರುವ ಉದ್ದೇಶಿತ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿಯೇ ವೆಚ್ಚಗಳನ್ನು ಅಂದಾಜಿಸತಕ್ಕದ್ದು**. ಉದ್ದೇಶಿತ ಲೆಕ್ಕ ಶೀರ್ಷಿಕೆ 051–ಸಾಮಾನ್ಯ ವೆಚ್ಚಗಳು ಹಾಗೂ 059–ಇತರೆ ವೆಚ್ಚಗಳಡಿಯಲ್ಲಿ ವರ್ಗೀಕರಿಸಿರುವುದನ್ನು ಆದಷ್ಟು ಕಡಿಮೆ ಮಾಡಲು ತಿಳಿಸಿದೆ. ಖಜಾನೆ–2ರಲ್ಲಿ Bill cliam type – Object code ಆಧಾರದಲ್ಲಿ Mapping ಮಾಡಿರುವುದರಿಂದ ವೆಚ್ಚದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸುತ್ತೋಲೆಯ ಅನುಬಂಧ–3ರಲ್ಲಿ ತಿಳಿಸಿರುವ ಉದ್ದೇಶಿತ ಲೆಕ್ಕ ಶೀರ್ಷಿಕೆಗಳಡಿಯೇ ಎಲ್ಲಾ ಇಲಾಖೆಗಳು 2018–19ನೇ ಸಾಲಿನ ವೆಚ್ಚದ ಅಂದಾಜುಗಳನ್ನು ವರ್ಗೀಕರಿಸಲು ತಿಳಿಸಿದೆ. ಇಲ್ಲವಾದಲ್ಲಿ ಖಜಾನೆ–2ರಲ್ಲಿ ಬಿಲ್ಲುಗಳು ತಿರಸ್ಕೃತವಾಗುತ್ತದೆ ಎಂಬುದನ್ನು ಗಮನದಲ್ಲಿಡತಕ್ಕದ್ದು.

**2. <u>ಅನುಬಂಧ–ಬಿ ವೇತನಗಳ ಅಂದಾಜುಗಳು:–</u>**

ದಿನಾಂಕ:13–10–2017ರ ಸುತ್ತೋಲೆ ಸಂಖ್ಯೆ: ಆಇ 11 ಬಿಪಿಇ 2017ರಲ್ಲಿ ಈಗಾಗಲೇ ಈ ಸಂಬಂಧ ಸೂಚನೆಗಳನ್ನು ನೀಡಲಾಗಿರುತ್ತದೆ.

**3. <u>ಅಂತಿಮ ರಜಾ ಸೌಲಭ್ಯಗಳು:–</u>**

2018–19ನೇ ಸಾಲಿನಲ್ಲಿ ನಿವೃತ್ತಿಯಾಗುವ ನೌಕರರುಗಳ ಅಂತಿಮ ರಜಾ ಸೌಲಭ್ಯಗಳನ್ನು ಅಂದಾಜುಗಳನ್ನು ಮಾಡಲು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ದೊರೆಯುವ ಅಂಕಿ ಅಂಶಗಳನ್ನು ಆರ್ಥಿಕ ಇಲಾಖೆಯು ಪಡೆದುಕೊಳ್ಳುತ್ತದೆ. ಕರ್ನಾಟಕ ಉಚ್ಛ ನ್ಯಾಯಾಲಯವು ಮಾತ್ರ **ಅನುಬಂಧ–4** ರಲ್ಲಿರುವಂತೆ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ.

**4. <u>ಸಹಾಯಾನುದಾನ ಮತ್ತು ನಿರ್ವಹಣಾ ವೆಚ್ಚ:–</u>**

ನಿಖರ ಉದ್ದೇಶ / ಸ್ವರೂಪಗಳನ್ನು ಸ್ಪಷ್ಟವಾಗಿ ತಿಳಿಯಲು ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಸಹಾಯಾನುದಾನ ಮತ್ತು ನಿರ್ವಹಣಾ ವೆಚ್ಚಗಳನ್ನು ವಿಂಗಡಿಸಿ ವಿಷದವಾಗಿ ಪ್ರಕಟಪಡಿಸುವಂತೆ ತಿಳಿಸಿರುತ್ತಾರೆ. ಆದ್ದರಿಂದ ವೆಚ್ಚದ ಮೇಲಿನ ಸ್ವರೂಪವನ್ನು ಆಧರಿಸಿ ಉದ್ದೇಶ ಶೀರ್ಷಿಕೆಗಳಾದ 101–ಸಹಾಯಾನುದಾನ–ವೇತನಗಳು, 102–ಸಹಾಯಾನುದಾನ ಆಸ್ತಿಗಳ ಸೃಜನೆ, 103–ಸಹಾಯಾನುದಾನ–ಸಾಮಾನ್ಯ, 115–ಸಹಾಯಾನುದಾನ–ಹೊರಗುತ್ತಿಗೆ, 118–ಸಹಾಯಾನುದಾನ–ಪಿಂಚಣಿ, 200–ನಿರ್ವಹಣಾ ವೆಚ್ಚ ಮತ್ತು 202–ನಿರ್ವಹಣೆಗಾಗಿ ವೇತನ/ಮಜೂರಿ ಅವುಗಳನ್ನು ಬಳಸಬೇಕಾಗಿರುತ್ತದೆ. ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯನ್ನೊಳಗೊಂಡಿರುವ ಸಂಸ್ಥೆಗಳ ಸಹಾಯಾನುದಾನದ ವಿವರಗಳನ್ನು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯಲ್ಲಿ ಲಭ್ಯವಿರುವ ಅಂಕಿ

ಅಂಶಗಳನ್ನು ಉಪಯೋಗಿಸಿ ಅಂದಾಜಿಸಲಾಗುವುದು. ಆದರೆ, ಶಿಕ್ಷಣ ಇಲಾಖೆ ಮತ್ತು ಆರೋಗ್ಯ ವಲಯಗಳಡಿಯಲ್ಲಿನ ವಿಶ್ವವಿದ್ಯಾನಿಲಯಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಬ್ಲಾಕ್ ಅನುದಾನವನ್ನು ಅವುಗಳು ಸಲ್ಲಿಸುವ ಮಾಹಿತಿ ಆಧಾರದ ಮೇಲೆ ಅಂತಿಮಗೊಳಿಸುವ ಈಗಿರುವ ಪದ್ಧತಿಯನ್ನೇ ಮುಂದುವರಿಸತಕ್ಕದ್ದು. ಈ ವಿವರವಾದ ಮಾಹಿತಿಗಳನ್ನು ಸಲ್ಲಿಸುವುದರ ಜೊತೆಗೆ ವಿಶ್ವವಿದ್ಯಾನಿಲಯಗಳು **ಅನುಬಂಧ-5 ರಂತೆ** ಹೆಚ್ಚುವರಿ ಮಾಹಿತಿಗಳನ್ನು ಸಲ್ಲಿಸತಕ್ಕದ್ದು. ಈ ಸುತ್ತೋಲೆಯ **ಅನುಬಂಧ-6 (ಎ)** ಮತ್ತು **ಅನುಬಂಧ-6 (ಬಿ)**ರಂತೆ ಸ್ವಾಯತ್ತ ಸಂಸ್ಥೆಗಳು ಮಾಹಿತಿಗಳನ್ನು ಸಲ್ಲಿಸತಕ್ಕದ್ದು. ಇದರಿಂದಾಗಿ 2018-19ನೇ ಸಾಲಿಗಾಗಿ ವಿಶ್ವವಿದ್ಯಾನಿಲಯಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಗೆ ಬ್ಲಾಕ್ ಅನುದಾನವನ್ನು ನಿಖರವಾಗಿ ಅಂದಾಜು ಮಾಡಲು ಆರ್ಥಿಕ ಇಲಾಖೆಗೆ ಅನುಕೂಲವಾಗುತ್ತದೆ.

5. **ದೃವೀಕರಣ ಅಥವಾ ಯೋಜನೆಗಳ ವಿಲೀನೀಕರಣ:-**

ಕಳೆದ ಹಲವಾರು ವರ್ಷಗಳಿಂದಲೂ ಅನೇಕ ಇಲಾಖೆಗಳು ಕಾರ್ಯಯೋಜನೆಗಳನ್ನು ದೃವೀಕರಿಸಲು / ವಿಲೀನಗೊಳಿಸಲು ಕ್ರಮವನ್ನು ಕೈಗೊಂಡಿವೆ. ಆದರೆ ಆಯವ್ಯಯ ಅಂದಾಜುಗಳ ತಯಾರಿಕೆಯ ಕಾರ್ಯವು ಅಂತಿಮ ಘಟ್ಟದಲ್ಲಿರುವಾಗ ಫೆಬ್ರವರಿ ಮಾಹೆಯ ಅಂತ್ಯದಲ್ಲಿ ಅಥವಾ ಮಾರ್ಚ್ ತಿಂಗಳ ಮೊದಲ ವಾರದ ಅವಧಿಯಲ್ಲಿ ಈ ಬಗ್ಗೆ ಅಂತಿಮ ನಿರ್ಧಾರವನ್ನು ಆರ್ಥಿಕ ಇಲಾಖೆಗೆ ತಿಳಿಸಲಾಗುತ್ತದೆ. ಅಂತಿಮ ಘಟ್ಟದ ಅವಧಿಯಲ್ಲಿ ಇಲಾಖೆಗಳು ಪ್ರಸ್ತಾಪಿಸುವ ವಿಲೀನೀಕರಣದ ಪ್ರಸ್ತಾವನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಅಭಿವೃದ್ಧಿ ಆಯುಕ್ತರ ಅನುಮೋದನೆಯೊಂದಿಗೆ ಸಮಯೋಚಿತ ವೇಳೆಯಲ್ಲಿ ವಿಲೀನೀಕರಣದ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡು ಆರ್ಥಿಕ ಇಲಾಖೆಗೆ ವಿವರವಾದ ಮಾಹಿತಿಯನ್ನು ಒದಗಿಸಬೇಕೆಂದು ತಿಳಿಸಲಾಗಿದೆ.

## ಡಿ. **ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಹೆಚ್ಚುವರಿ ಮಾಹಿತಿಗಳ ಪ್ರಕಟಣೆ:-**

13ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ರಾಜ್ಯ ಸರ್ಕಾರವು ವಾರ್ಷಿಕ ಆಯವ್ಯಯ / ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಕೆಲವು ಹೆಚ್ಚುವರಿ ಮಾಹಿತಿಗಳನ್ನು ಪ್ರಕಟಿಸಬೇಕಾಗಿದೆ. ಆದ್ದರಿಂದ ಎಲ್ಲಾ ಆಯವ್ಯಯ ಅಂದಾಜು ಅಧಿಕಾರಿಗಳು 2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಜೊತೆಗೆ ಈ ಕೆಳಕಂಡ ಮಾಹಿತಿಗಳನ್ನು ತಯಾರಿಸಿ ಅವುಗಳನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

ಅ. **ಮುಂದಿನ ಮೂರು ವರ್ಷಗಳ ಅಂದಾಜುಗಳು:-**

2018-19ನೇ ಸಾಲಿನ ಆಯವ್ಯಯ ಅಂದಾಜುಗಳ ಜೊತೆಯಲ್ಲಿ ಅಂದಾಜು ಅಧಿಕಾರಿಗಳು ಎಲ್ಲಾ ರಾಜಸ್ವ ಮತ್ತು ವೆಚ್ಚ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಮುಂದಿನ ಮೂರು ವರ್ಷಗಳ ಅಂದಾಜುಗಳನ್ನು (2019-20 ರಿಂದ 2021-22) ಸಲ್ಲಿಸತಕ್ಕದ್ದು. ಹೀಗೆ ಸಲ್ಲಿಸಲ್ಪಡುವ ಪ್ರತಿಯೊಂದು ಆಯವ್ಯಯ ಅಂದಾಜುಗಳು ಹೇಗೆ ನಿರ್ಧರಿಸಲ್ಪಟ್ಟವೆಂಬ ಬಗ್ಗೆ ವಿವರಗಳನ್ನೊಳಗೊಂಡಿರಬೇಕು. ಅಂದಾಜು ಮಾಡುವಲ್ಲಿ ನಿಖರತೆ ಹೊಂದುವ ಸಲುವಾಗಿ ಯಾವ ಮಿತಿಯೊಳಗೆ ಅಂದಾಜು ಏರಿಳಿತವಾಗುವುದೋ ಅ ಕುರಿತಾದ ವಿವರಗಳನ್ನು ಒದಗಿಸತಕ್ಕದ್ದು. ಮುಂದಿನ ವರ್ಷಗಳ ಆಯವ್ಯಯ ಅಂದಾಜುಗಳನ್ನು ತಯಾರಿಸುವಾಗ ಇಲಾಖೆಗಳು ಮಧ್ಯಮಾವಧಿ ವಿತ್ತೀಯ ಯೋಜನೆ 2017-2021 ಸಂಪುಟದ ಉಪಯುಕ್ತತೆ ಪಡೆದು, ವಿಸ್ತೃತ ಬೆಳವಣಿಗೆ ದರವನ್ನು ನಿರ್ಧರಿಸಬೇಕು. ಇದರಿಂದಾಗಿ ಆ ವರ್ಷಗಳಲ್ಲಿ ಸಂಭಾವ್ಯ ಗುರಿಗಳು ಆಯವ್ಯಯ ಲಭ್ಯತೆಯೊಳಗಿರುತ್ತವೆ.

ಆ. **ಪ್ರಮುಖ ತೆರಿಗೆ ಪ್ರಸ್ತಾವನೆಯ ಅನುಪಾಲನೆ ವೆಚ್ಚಗಳು:-**

ಪ್ರಮುಖ ತೆರಿಗೆ ಸಂಗ್ರಹಣೆ ಇಲಾಖೆಗಳು ತೆರಿಗೆ ಸ್ವೀಕೃತಿಗಳನ್ನು ಅಂದಾಜು ಮಾಡುವಾಗ ಇದಕ್ಕೆ ಹೊಂದಿಕೊಂಡಿರುವ ಅನುಪಾಲನಾ ವೆಚ್ಚಗಳು ಮತ್ತು ಇದನ್ನು ಅಂದಾಜಿಸುವಲ್ಲಿ ಅನುಸರಿಸುವ ಕಾರ್ಯ ವಿಧಾನಗಳನ್ನು ತಿಳಿಸಬೇಕಾಗಿದೆ. ಮುಂದಿನ ಮೂರು ವರ್ಷಗಳಿಗಾಗಿ ನಿರೀಕ್ಷಿಸಿದ ತೆರಿಗೆ ಸ್ವೀಕೃತಿ ಮತ್ತು ಸಂಬಂಧಿಸಿದ ಅನುಸರಣಾ ವೆಚ್ಚಗಳ ದರವನ್ನು ಸಹ ಅಂದಾಜು ಮಾಡಬೇಕಾಗಿರುತ್ತದೆ ಮತ್ತು ಸಲ್ಲಿಸಬೇಕಾಗಿದೆ. ಮೇಲೆ ಹೇಳಿರುವಂತೆ ಇಲ್ಲಿಯೂ ಸಹ ಗುರಿಯು ಏಕರೀತಿಯಲ್ಲಿರುವುದನ್ನು ಕಾಯ್ದುಕೊಳ್ಳುವುದರ ಜೊತೆಗೆ ಸ್ವೀಕೃತಿ ಮತ್ತು ತತ್ಸಂಬಂಧಿ ವೆಚ್ಚಗಳ ಮುನ್ನಂದಾಜುಗಳನ್ನು ಅಂದಾಜಿಸಲು ಅನುಸರಿಸುವ ಮಾನದಂಡ ಮತ್ತು ಇವುಗಳಲ್ಲಿ ಉಂಟಾಗಬಹುದಾದ ಅಂತರದ ವ್ಯಾಪ್ತಿಯನ್ನು

ನಮೂದಿಸಿರಬೇಕು. ನಿರೀಕ್ಷಿತ ಸ್ವೀಕೃತಿಗಳು ಮತ್ತು ಅನುಸರಣಾ ವೆಚ್ಚಗಳನ್ನು ಅಂದಾಜಿಸುವ ಮಾನದಂಡ ಮತ್ತು ಗುರಿಗಳ ಸಮಂಜಸ ಮಾನದಂಡಗಳನ್ನು ವಿವರಿಸಬೇಕು. ಬೆಳವಣಿಗೆ ದರವನ್ನು ಊಹಿಸಲು ಮಧ್ಯಮಾವಧಿ ವಿತ್ತೀಯ ಯೋಜನೆ 2017–2021 ಸಂಪುಟವನ್ನು ಪರಾಮರ್ಶಿಸಬಹುದು.

ಇ. <u>ಕಟ್ಟಡಗಳು, ಸಾರ್ವಜನಿಕ ಖಾಲಿ ಜಮೀನು ಹಾಗೂ ಭೌತಿಕ ಮತ್ತು ಹಣಕಾಸಿನ ಆಸ್ತಿ ಮತ್ತು ಸಂಬಂಧಿಸಿದ ಜವಾಬ್ದಾರಿಗಳೊಂದಿಗೆ ಬಂಡವಾಳ ವೆಚ್ಚದ ರಾಜಸ್ವ ಪರಿಣಾಮಗಳನ್ನು ಬಿಂಬಿಸಬೇಕಾಗಿದೆ:</u>

ಬಂಡವಾಳ ವೆಚ್ಚ ರಾಜಸ್ವ ಪರಿಣಾಮಗಳೆಂದರೆ, ವೇತನಗಳ ಸ್ವರೂಪದಲ್ಲಿರುವ ರಾಜಸ್ವ ವೆಚ್ಚ, ನಿರ್ವಹಣೆ, ಹಿಂದಿನ ವಾರ್ಷಿಕ ವರ್ಷದ ಅಂತ್ಯದವರೆಗೆ ಬಂಡವಾಳ ವೆಚ್ಚದಿಂದ ಸೃಜಿಸಲಾದ ವಾಹನಗಳ ಮತ್ತು ಆಸ್ತಿಗಳ ನಿರ್ವಹಣೆಗೆ ತಗಲುವ ಇತರೆ ಆಡಳಿತಾತ್ಮಕ ವೆಚ್ಚಗಳು. ಭೌತಿಕ ಮತ್ತು ಹಣಕಾಸಿನ ಆಸ್ತಿಗಳು ಎಂದರೆ ಮುಕ್ತಾಯದ ಹಂತದಲ್ಲಿರುವ ಕಾಮಗಾರಿಗಳ ಮೇಲೆ ಖರ್ಚು ಮಾಡಿರುವ ವೆಚ್ಚಗಳು. ಪೂರ್ಣಗೊಂಡಿರುವ ಕಾಮಗಾರಿ / ಆಸ್ತಿಗಳ ಮೇಲೆ ಉಂಟಾಗುವ ಹೊಸ ರಾಜಸ್ವ ಪರಿಣಾಮ / ಅಗತ್ಯತೆಗಳನ್ನು ಸಹ ಆ ವರ್ಷದಲ್ಲಿ ಲೆಕ್ಕಾಚಾರ ಮಾಡಬೇಕು. ಪೂರ್ಣಗೊಂಡಿರದ ಕಾಮಗಾರಿಗಳ ಸಂದರ್ಭಗಳಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿ, ಕಾಮಗಾರಿ ಪೂರ್ಣಗೊಳ್ಳಲು ಅಗತ್ಯವಿರುವ ಅವಧಿಯ ಮಿತಿ ಮತ್ತು ಕಾಮಗಾರಿ ಪೂರ್ಣಗೊಳ್ಳುವಿಕೆಗೆ ಅವಶ್ಯವಿರುವ ಮೊತ್ತವನ್ನು ಅಂದಾಜಿಸಿ ಸಲ್ಲಿಸಬೇಕಾಗುತ್ತದೆ. ಸಾರ್ವಜನಿಕ ಖಾಲಿ ಜಮೀನುಗಳ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಜಮೀನು ಮತ್ತು ಕಟ್ಟಡಗಳ ಮಾಲೀಕತ್ವ, ಸ್ಥಳ, ಸಾರ್ವಜನಿಕ ಖಾಲಿ ಜಮೀನಿನ ವಿಸ್ತೀರ್ಣ, ಸರ್ವೇ ನಂಬರ್ ಮತ್ತು ಪ್ರಸ್ತುತ ಮಾರುಕಟ್ಟೆ ದರಗಳನ್ನು ಸಲ್ಲಿಸಬೇಕು. ಅಂತೆಯೇ ಕಟ್ಟಡಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ಮಾಲೀಕತ್ವ ಒಟ್ಟು ವಿಸ್ತೀರ್ಣ, ನಿರ್ಮಿಸಿರುವ ಕಟ್ಟಡ ವಿಸ್ತೀರ್ಣ, ಕಟ್ಟಡದ ಆಯುಷ್ಯ ಹಾಗೂ ನಿರ್ವಹಣಾ ವೆಚ್ಚಗಳನ್ನು ಸಲ್ಲಿಸಬೇಕಾಗಿದೆ. ಮೇಲೆ ತಿಳಿಸಿರುವ ಮಾಹಿತಿಯನ್ನು ಮುಂಬರುವ ಮೂರು ವರ್ಷಗಳಿಗೆ ಒದಗಿಸುವುದು.

ಈ. <u>ಪ್ರಮುಖ ಕಾರ್ಯನೀತಿ ಬದಲಾವಣೆಗಳಿಂದಾಗಿ ಉಂಟಾಗುವ ವೆಚ್ಚದ ಬದ್ಧತೆಗಳು:</u>

2017–18ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ಆಚರಣೆಗೆ ತರುವ ಪ್ರಮುಖ ಕಾರ್ಯನೀತಿ ಬದಲಾವಣೆಗಳಿಂದಾಗಿ ಉಂಟಾಗುವ ವೆಚ್ಚದ ಬದ್ಧತೆಗಳ ಬಗ್ಗೆ ವಿವರಗಳನ್ನು ನಮೂದಿಸಬೇಕೆಂದು ಇಲಾಖೆಗಳನ್ನು ಕೋರಲಾಗಿದೆ. 2018–19ನೇ ಸಾಲಿನ ಅಂದಾಜುಗಳ ಜೊತೆಯಲ್ಲಿ ಮುಂದಿನ ಮೂರು ವರ್ಷಗಳಿಗೆ (2021–22ರವರೆಗೆ) ಸಹ ಮಾಹಿತಿಗಳನ್ನು ಒದಗಿಸತಕ್ಕದ್ದು.

ಉ. <u>ಸಾರ್ವಜನಿಕ–ಖಾಸಗಿ ಪಾಲುಗಾರಿಕೆಯಲ್ಲಿ ಅಂತರ್ಗತ ಮತ್ತು ಪ್ರಕಟಗೊಳಿಸುವ ಹೊಣೆಗಾರಿಕೆಗಳು (ಪಿಪಿಪಿ)</u>
ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ ಯೋಜನೆಗಳನ್ನು ಕೈಗೊಂಡಿರುವಂತಹ ಇಲಾಖೆಗಳು (ಪಿಪಿಪಿ) ಖಾಸಗಿ ಪಾಲುದಾರರುಗಳಿಗೆ ಒದಗಿಸಿರುವ ಸರ್ಕಾರಿ ಜಮೀನು, ವಾರ್ಷಿಕ ಪಾವತಿ, ತೆರಿಗೆ ವಿನಾಯಿತಿ ಮುಂತಾದುವುಗಳ ಬಗ್ಗೆ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ನಮೂದಿಸಬೇಕು. ಇವುಗಳ ಜೊತೆಗೆ ಇತರೇ ಹೊಣೆಗಾರಿಕೆಗಳ ಮಾಹಿತಿಯನ್ನೂ ಸಹ ನಮೂದಿಸಬೇಕು.

ಈ ಅಂದಾಜುಗಳನ್ನು ತಯಾರಿಸುವಲ್ಲಿ ಇಲಾಖಾ ಮುಖ್ಯಸ್ಥರುಗಳು, ಪ್ರಾದೇಶಿಕ ಆಯುಕ್ತರುಗಳು, ಜಿಲ್ಲಾಧಿಕಾರಿಗಳು, ಮುಖ್ಯ ಇಂಜಿನಿಯರುಗಳು ಮತ್ತು ಇತರ ಅಂದಾಜು ತಯಾರಿಸುವ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನವನ್ನು ನೀಡಬೇಕೆಂದು ಕೋರಲಾಗಿದೆ. 2017–18ರ ಪರಿಷ್ಕೃತ ಅಂದಾಜುಗಳು ಮತ್ತು 2018–19ರ ಆಯವ್ಯಯ ಅಂದಾಜುಗಳೆರಡಕ್ಕೂ ವ್ಯತ್ಯಾಸಗಳನ್ನು ತೋರಿಸುವ ವಿವರಣಾ ಪಟ್ಟಿಯೊಂದಿಗೆ ಪೂರ್ಣಗೊಳಿಸಿದ ಮತ್ತು ಅಂತಿಮಗೊಳಿಸಿದ ಅಂದಾಜುಗಳನ್ನು "ಮೊದಲ ಆದ್ಯತೆ"ಯ ಮೇಲೆ ಸಂಬಂಧಿಸಿದ ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರ : ಸರ್ಕಾರದ ಕಾರ್ಯದರ್ಶಿಗಳ ಮೂಲಕ ಆರ್ಥಿಕ ಇಲಾಖೆಗೆ ನಿಗದಿತ ದಿನಾಂಕದೊಳಗೆ ಕಳುಹಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಿಗದಿತ ಅಂತಿಮ ದಿನಾಂಕದೊಳಗೆ ಮಾಹಿತಿ ನೀಡಲು ಇಲಾಖೆಗಳು ತಕ್ಷಣದಿಂದಲೇ ಅಧೀನ ಕಛೇರಿಗಳಿಂದ

ಅಗತ್ಯವಿರುವ ಎಲ್ಲಾ ವಿವರಗಳನ್ನು ಪಡೆಯುವುದು. ನಿಗದಿತ ದಿನಾಂಕದ ನಂತರ ಸ್ವೀಕರಿಸಿದ ಅಂದಾಜುಗಳನ್ನು ಪರಿಗಣಿಸುವುದಿಲ್ಲ ಮತ್ತು ಅಂದಾಜುಗಳನ್ನು ಆರ್ಥಿಕ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯ ಮೇರೆಗೆ ಅಂತಿಮಗೊಳಿಸಲಾಗುವುದು. ಆಯವ್ಯಯ ಅಂದಾಜುಗಳಲ್ಲಾಗುವ ಅನುದಾನದ ಕಡಿತಕ್ಕೆ ಮತ್ತು ಅಂದಾಜುಗಳು ಸೇರದಿರುವುದಕ್ಕೆ ಸಂಬಂಧಿಸಿದ ಇಲಾಖೆಗಳೇ ಹೊಣೆಗಾರರಾಗುತ್ತಾರೆ ಹಾಗೂ ಇಂತಹ ಲೋಪಗಳಿಗೆ 2018-19ರ ಪೂರಕ ಅಂದಾಜುಗಳಲ್ಲಿ ಅನುದಾನಕ್ಕಾಗಿ ಪರಿಗಣಿಸಲಾಗುವುದಿಲ್ಲ. 05-12-2017 ರ ಒಳಗಾಗಿ ವೆಚ್ಚ ಅಂದಾಜುಗಳನ್ನು ಆರ್ಥಿಕ ಇಲಾಖೆಗೆ ತಪ್ಪದೆ ಒದಗಿಸತಕ್ಕದ್ದು.

5. ಈ ಅಧಿಕೃತ ಜ್ಞಾಪನ ಪತ್ರವನ್ನು ಆರ್ಥಿಕ ಇಲಾಖೆಯ ವೆಬ್‌ಸೈಟ್ www.finance.kar.nic.in ನಿಂದ ಪಡೆಯಬಹುದು.

**(ರಿತ್ವಿಕ್ ಪಾಂಡೆ)**
ಸರ್ಕಾರದ ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ.

**ಇವರಿಗೆ:-**

(1) ಪ್ರಧಾನ ಮಹಾಲೇಖಪಾಲರು (ಎ & ಇ) / (ಜಿ & ಎಸ್‌ಎಸ್‌ಎ) / (ಇ & ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು
(2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
(3) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
(4) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
(5) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
(6) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
(7) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
(8) ಆರ್ಥಿಕ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.
(9) ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
(10) ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.

**ಅನುಬಂಧ–1**

## 2018-19ನೇ ಸಾಲಿನ ಆಯವ್ಯಯ ಕಾರ್ಯಕ್ರಮವನ್ನು ನಿಯಂತ್ರಿಸುವ ದಿನಾಂಕ ಪಟ್ಟಿ

### I. ಆರ್ಥಿಕ ಇಲಾಖೆಯು ಕಳುಹಿಸುವ ಆಯವ್ಯಯ ಸೂಚನೆಗಳು

| | | | |
|---|---|---|---|
| (i) | ವೇತನ ಅಂದಾಜುಗಳ ತಯಾರಿಕೆಗಾಗಿ ಸೂಚನೆಗಳು ( **ಅನುಬಂಧ–ಬಿ**) | ಎಲ್ಲಾ ಆಯವ್ಯಯ ಅಂದಾಜು ಅಧಿಕಾರಿಗಳು | 13ನೇ ಅಕ್ಟೋಬರ್ 2017 |
| (ii) | ರಾಜಸ್ವ ಅಂದಾಜುಗಳ ತಯಾರಿಕೆಗಾಗಿ ಸೂಚನೆಗಳು | ಎಲ್ಲಾ ಆಯವ್ಯಯ ಅಂದಾಜು ಅಧಿಕಾರಿಗಳು | 13ನೇ ಅಕ್ಟೋಬರ್ 2017 |
| (iii) | ವೆಚ್ಚ ಅಂದಾಜುಗಳ ತಯಾರಿಕೆಗಾಗಿ ಸಾಮಾನ್ಯ ಸೂಚನೆಗಳು (ವೇತನಗಳನ್ನು ಹೊರತುಪಡಿಸಿ) | ಎಲ್ಲಾ ಆಯವ್ಯಯ ಅಂದಾಜು ಅಧಿಕಾರಿಗಳು | 13ನೇ ಅಕ್ಟೋಬರ್ 2017 |

### II ಪ್ರಧಾನ ಮಹಾಲೇಖಪಾಲರಿಂದ ಕಳೆದ ಸಾಲಿನ ವಾಸ್ತವಿಕಗಳ ಸ್ವೀಕೃತಿ

| | | | |
|---|---|---|---|
| i) | ರಾಜಸ್ವ ಸ್ವೀಕೃತಿಗಳು, ರಾಜಸ್ವ ವೆಚ್ಚ, ಬಂಡವಾಳ ಮತ್ತು ಸಾರ್ವಜನಿಕ ಲೆಕ್ಕಗಳ ಅಡಿಯಲ್ಲಿ 2016–17ರ ವರ್ಷಕ್ಕಾಗಿ ವಾಸ್ತವಿಕಗಳು | ಮಹಾಲೇಖಪಾಲರು, (ಲೆಕ್ಕಪತ್ರಗಳು ಮತ್ತು ಹಕ್ಕುಗಳು) ಕರ್ನಾಟಕ, ಬೆಂಗಳೂರು. | 26ನೇ ಆಗಸ್ಟ್ 2017 |
| ii) | ಸ್ವೀಕೃತಿ ಶೀರ್ಷಿಕೆಗಳ ಅಡಿಯಲ್ಲಿ 2017–18ರ ಸಾಲಿನ ಮೊದಲ ಆರು ತಿಂಗಳುಗಳಿಗಾಗಿ ವಾಸ್ತವಿಕಗಳು | – ಅದೇ– | ನಿರೀಕ್ಷಿಸಲಾಗಿದೆ |
| iii) | ವೆಚ್ಚದ ಶೀರ್ಷಿಕೆಗಳ ಅಡಿಯಲ್ಲಿ 2017–18ನೇ ಸಾಲಿನ ಮೊದಲ ಆರು ತಿಂಗಳುಗಳಿಗಾಗಿ ವಾಸ್ತವಿಕಗಳು | – ಅದೇ – | ನಿರೀಕ್ಷಿಸಲಾಗಿದೆ |

### III ಆರ್ಥಿಕ ಇಲಾಖೆಯಲ್ಲಿ ಈ ಕೆಳಗಿನ ಆಯವ್ಯಯ ಅಂದಾಜುಗಳ ಸ್ವೀಕೃತಿ

| | | |
|---|---|---|
| i) | ಪರಿಶಿಷ್ಟ 'ಬಿ' ಅಂದಾಜುಗಳು ಅಂದರೆ ವೇತನ ಅಂದಾಜುಗಳ ವಿವರಗಳು | 30ನೇ ನವೆಂಬರ್ 2017 |
| ii) | ಇಲಾಖೆಗಳು ಸಿದ್ಧಪಡಿಸಿದ ರಾಜಸ್ವ ಅಂದಾಜುಗಳು | 11ನೇ ಡಿಸೆಂಬರ್ 2017 |
| iii) | ಮಹಾಲೇಖಪಾಲರು ಸಿದ್ಧಪಡಿಸಿದ ಅಂದಾಜುಗಳು | 26ನೇ ಡಿಸೆಂಬರ್ 2017 |
| Iv) | ವೆಚ್ಚದ ಅಂದಾಜುಗಳು, (ರಾಜ್ಯ ಮತ್ತು ಜಿಲ್ಲಾ ವಲಯಗಳು) | 05ನೇ ಡಿಸೆಂಬರ್ 2017 |

**IV ಆರ್ಥಿಕ ಇಲಾಖೆಯಿಂದ ಆಯವ್ಯಯ ಅಂದಾಜುಗಳನ್ನು ಅಂತಿಮಗೊಳಿಸುವಿಕೆ**

| | | |
|---|---|---|
| i) | 2016–17ರ ಮಹಾಲೇಖಪಾಲರ ವಾಸ್ತವಿಕಗಳನ್ನು ದಾಖಲಿಸುವುದು | 29ನೇ ಸೆಪ್ಟೆಂಬರ್ 2017 |
| ii) | ಅಪೆಂಡಿಕ್ಸ್ 'ಬಿ' ನಲ್ಲಿನ ಅಂದಾಜುಗಳ ಪರಿಶೀಲನೆ ಮತ್ತು ಅಂತಿಮಗೊಳಿಸುವಿಕೆ | 30ನೇ ಡಿಸೆಂಬರ್ 2017 |
| iiii) | ಉಳಿತಾಯಗಳ ಗುರುತಿಸುವಿಕೆ ಮತ್ತು ಪರಿಷ್ಕೃತ ಅಂದಾಜುಗಳ ಅಂತಿಮಗೊಳಿಸುವಿಕೆ | 20ನೇ ಡಿಸೆಂಬರ್ 2017 |
| iv) | ರಾಜಸ್ವ ಅಂದಾಜುಗಳನ್ನು ಅಂತಿಮಗೊಳಿಸುವುದು | 05ನೇ ಡಿಸೆಂಬರ್ 2017 |

ಅನುಬಂಧ – 2

ಮುಖ್ಯ ಲೆಕ್ಕ ಶೀರ್ಷಿಕೆ ಅನುಸಾರ

## ವೆಚ್ಚ ಅಂದಾಜು

## 2018–19ನೇ ಸಾಲಿನ ಅಂದಾಜುಗಳು ಹಾಗೂ 2017–18 ಮತ್ತು 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ನಡುವಿನ ವ್ಯತ್ಯಾಸಗಳು

| ಲೆಕ್ಕ ಶೀರ್ಷಿಕೆ | ಆಯವ್ಯಯ ಅಂದಾಜು 2017–18 | 2018–19ರ ಆಯವ್ಯಯದ ಅಂದಾಜುಗಳು | 2017–18ರ ಪರಿಷ್ಕೃತ ಅಂದಾಜುಗಳು ಮತ್ತು 2018–19ರ ಆಯವ್ಯಯ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ/ಇಳಿತ | ವ್ಯತ್ಯಾಸಗಳಿಗೆ ಕಾರಣಗಳು | ಆರ್ಥಿಕ ಇಲಾಖೆಯಲ್ಲಿ ಭರ್ತಿ ಮಾಡಲಾಗುವುದು. | | |
|---|---|---|---|---|---|---|---|
| | | | | | 2016–17ರ ವಾಸ್ತವಿಕಗಳು | 2017–18ರ 6ತಿಂಗಳ ವಾಸ್ತವಿಕಗಳು | ಆರ್ಥಿಕ ಇಲಾಖೆಯ ಅಭಿಪ್ರಾಯ |
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

**ಅನುಬಂಧ–3**

**2018–19ನೇ ಸಾಲಿಗಾಗಿ ಕಾರ್ಯನಿರತ ಉದ್ದೇಶ ಶೀರ್ಷಿಕೆಗಳು**

| ಉದ್ದೇಶ ಶೀರ್ಷಿಕೆ ಮತ್ತು ವಿವರ | | ವಿಲೀನದ ನಂತರ ಉದ್ದೇಶ ಶೀರ್ಷಿಕೆ ಮತ್ತು ವಿವರ | |
|---|---|---|---|
| 1 | 2 | 3 | 4 |
| 001 | ಮಂತ್ರಿಗಳು, ಸಭಾಧ್ಯಕ್ಷರುಗಳು, ಅಧಿಕಾರೇತರ ಸದಸ್ಯರುಗಳು ಇತ್ಯಾದಿಯವರ ಸಂಚಿತ ವೇತನ | 001 | ಸಂಚಿತ ವೇತನ |
| 002 | ಅಧಿಕಾರಿಗಳ ವೇತನ | 002 | ಅಧಿಕಾರಿಗಳ ವೇತನ |
| 003 | ಸಿಬ್ಬಂದಿ ವೇತನ | 003 | ಸಿಬ್ಬಂದಿ ವೇತನ |
| 004 | ತಾತ್ಕಾಲಿಕ ಪರಿಹಾರ | 004 | ತಾತ್ಕಾಲಿಕ ಪರಿಹಾರ |
| 011 | ತುಟ್ಟಿ ಭತ್ಯೆ | 011 | ತುಟ್ಟಿ ಭತ್ಯೆ |
| 014 | ಇತರೆ ಭತ್ಯೆಗಳು | 014 | ಇತರೆ ಭತ್ಯೆಗಳು |
| 031<br>063<br>316<br>317 | ಮಜೂರಿ<br>ಸಂಭಾವನೆ<br>ಪಾರಿತೋಷಕ<br>ತರಬೇತಿ | 015 | ಪೂರಕ ವೆಚ್ಚಗಳು |
| 020 | ವೈದ್ಯಕೀಯ ಭತ್ಯೆ | 020 | ವೈದ್ಯಕೀಯ ಭತ್ಯೆ |
| 021 | ವೈದ್ಯಕೀಯ ವೆಚ್ಚಗಳ ಮರುಪಾವತಿ | 021 | ವೈದ್ಯಕೀಯ ವೆಚ್ಚಗಳ ಮರುಪಾವತಿ |
| | | 032 | ಬಂಡವಾಳ ಆಸ್ತಿಗಳ ಸೃಜನೆಗಾಗಿ ಅನುದಾನಗಳು |
| | | 033 | ದಿನಗೂಲಿ |
| | | 034 | ಗುತ್ತಿಗೆ / ಹೊರಗುತ್ತಿಗೆ |
| 041 | ಪ್ರಯಾಣ ವೆಚ್ಚಗಳು | 041 | ಪ್ರಯಾಣ ವೆಚ್ಚಗಳು |
| 050 | ಕಛೇರಿ ವೆಚ್ಚಗಳು | 050 | ಕಛೇರಿ ವೆಚ್ಚಗಳು |
| 075<br>080<br>120<br>122<br>171 | ಗ್ರಂಥಾಲಯಗಳು ಮತ್ತು ನಿಯತ ಕಾಲಿಕೆಗಳು<br>ಮುದ್ರಣ, ಪ್ರಕಟಣೆ ಮತ್ತು ಜಾಹೀರಾತು<br>ಅತಿಥ್ಯ ವೆಚ್ಚಗಳು<br>ಮನರಂಜನೆ ವೆಚ್ಚಗಳು<br>ಗಣಕಯಂತ್ರ ಸೌಲಭ್ಯಗಳು | 051 | ಸಾಮಾನ್ಯ ವೆಚ್ಚಗಳು |
| 354<br>052 | ದೂರವಾಣಿ ವೆಚ್ಚಗಳು – ಮಂತ್ರಿಗಳ ಪರಿಷತ್ತು<br>ದೂರವಾಣಿ ವೆಚ್ಚಗಳು | 052 | ದೂರವಾಣಿ ವೆಚ್ಚಗಳು |
| 053 | ಪೀಠೋಪಕರಣ ಖರೀದಿ / ಜೋಡಣೆ | 053 | ಪೀಠೋಪಕರಣಗಳ ಖರೀದಿ / ಜೋಡಣೆ |

| | | | |
|---|---|---|---|
| 059<br>130<br>298<br>308<br>424<br>425<br>500 | ಇತರೆ ವೆಚ್ಚಗಳು<br>ಹರಾಜು ಪ್ರಕಟಣೆ ವೆಚ್ಚಗಳು<br>ಬಹುಮಾನ ಧನ<br>ಆಹಾರ ಮತ್ತು ಮೇವು<br>ಗ್ರಾಮೀಣ ನೀರು ಸರಬರಾಜು ಯೋಜನೆ<br>ನಗರ ನೀರು ಸರಬರಾಜು ಯೋಜನೆ<br>ಇಡಿಗಂಟು | 059 | ಇತರೆ ವೆಚ್ಚಗಳು |
| 060 | ಇತರೇ ಶುಲ್ಕಗಳು | 060 | ಪರಿಹಾರ ವೆಚ್ಚದ ವಸೂಲಾತಿ |
| 058<br>072 | ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕಗಳು<br>ಬಾಡಿಗೆ, ದರ ಮತ್ತು ತೆರಿಗೆಗಳು | 071 | ಕಟ್ಟಡ ವೆಚ್ಚಗಳು |
| 100<br>101<br>102<br>103<br>104<br>106 | ಹಣಕಾಸು ಸಹಾಯ / ಪರಿಹಾರ<br>ಸಹಾಯಾನುದಾನ<br>ಸಹಾಯಾನುದಾನ – ಆಸ್ತಿಗಳ ಸೃಜನೆ<br>ಸಹಾಯಾನುದಾನ – ಸಾಮಾನ್ಯ<br>ಕೊಡುಗೆ<br>ಸಹಾಯ ಧನ | 100<br>101<br>102<br>103<br>104<br>106 | ಹಣಕಾಸು ಸಹಾಯ / ಪರಿಹಾರ<br>ಸಹಾಯಾನುದಾನ – ವೇತನಗಳು<br>ಸಹಾಯಾನುದಾನ – ಆಸ್ತಿಗಳ ಸೃಜನೆ<br>ಸಹಾಯಾನುದಾನ – ಸಾಮಾನ್ಯ<br>ಕೊಡುಗೆ<br>ಸಹಾಯ ಧನ |
| – | – | 115 | ಸಹಾಯಾನುದಾನ – ಹೊರಗುತ್ತಿಗೆ |
| 111<br>131<br>095<br>310 | ವಿದ್ಯಾರ್ಥಿ ವೇತನ ಮತ್ತು ಶಿಷ್ಯ ವೇತನ<br>ರಹಸ್ಯ ಸೇವೆಗಳ ವೆಚ್ಚ<br>ಪಠ್ಯ ಪುಸ್ತಕಗಳು<br>ಏಜೆಂಟ್‌ಗಳಿಗೆ ನೀಡುವ ದಳ್ಳಾಳಿ | 117 | ವಿದ್ಯಾರ್ಥಿವೇತನಗಳು ಮತ್ತು ಉತ್ತೇಜನಗಳು |
| – | –– | 118 | ಸಹಾಯಾನುದಾನ ವಿಶ್ರಾಂತಿ ವೇತನಗಳು |
| 125 | ಆಧುನೀಕರಣ | 125 | ಆಧುನೀಕರಣ |
| 137<br>145<br>154<br>165<br>166<br>167<br>169<br>171<br>459<br>381 | ಸಮೀಕ್ಷೆ ಮತ್ತು ತನಿಖೆಗಳು<br>ಭೂಸ್ವಾಧೀನ<br>ವಿಸ್ತರಣೆಗಳು ಮತ್ತು ಸುಧಾರಣೆಗಳು<br>ಜಲಾಶಯಗಳು<br>ಅಣೆಕಟ್ಟು ಮತ್ತು ಸಂಬಂಧಿಸಿದ ಕೆಲಸಗಳು<br>ಕಾಲುವೆಗಳು ಮತ್ತು ಶಾಖೆಗಳು–ಸಾಮಾನ್ಯ<br>ನದೀ ಶಾಖೆಗಳು–ಸಾಮಾನ್ಯ<br>ನೀರು ಮಾರ್ಗಗಳು<br>ಬಂಡವಾಳ ವೆಚ್ಚ<br>ಸಾಮಾನ್ಯ | 132 | ಬಂಡವಾಳ ವೆಚ್ಚಗಳು |

| | | | |
|---|---|---|---|
| 133 | ವಿಶೇಷ ಅಭಿವೃದ್ಧಿ ಯೋಜನೆ | 133<br>134<br>135<br>136 | ವಿಶೇಷ ಅಭಿವೃದ್ಧಿ ಯೋಜನೆ<br>ವಿಶೇಷ ಅಭಿವೃದ್ಧಿ ಯೋಜನೆ–ನಬರ್ಡ್<br>ವಿಶೇಷ ಅಭಿವೃದ್ಧಿ ಯೋಜನೆ–ಪರಿಶಿಷ್ಟ ಜಾತಿ ಉಪ ಯೋಜನೆ<br>ವಿಶೇಷ ಅಭಿವೃದ್ಧಿ ಯೋಜನೆ–ಗಿರಿಜನ ಉಪ ಯೋಜನೆ |
| 139 | ಭಾರಿ ಕಾಮಗಾರಿಗಳು | 139 | ಭಾರಿ ಕಾಮಗಾರಿಗಳು |
| 140 | ಸಣ್ಣ ಕಾಮಗಾರಿಗಳು | 140 | ಸಣ್ಣ ಕಾಮಗಾರಿಗಳು |
| | | 145 | ಭೂ ಸ್ವಾಧೀನ |
| 147 | ನಿವೇಶನ ಮತ್ತು ಕಟ್ಟಡಗಳು | 147 | ನಿವೇಶನ ಮತ್ತು ಕಟ್ಟಡಗಳು |
| | | 154 | ಸುಧಾರಣೆಗಳು |
| <br>172 | <br>ರಸ್ತೆಗಳು | 160<br>172 | ನವೀಕರಣ<br>ರಸ್ತೆಗಳು |
| 173<br>180<br>182 | ಸೇತುವೆಗಳು<br>ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು<br>ದುರಸ್ತಿಗಳು ಮತ್ತು ವಾಹನಗಳು | 173<br>180<br>182 | ಸೇತುವೆಗಳು<br>ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು<br>ದುರಸ್ತಿಗಳು ಮತ್ತು ವಾಹನಗಳು |
| 186 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ | 186 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ |
| 187 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ––ಪರಿಶಿಷ್ಟ ಜಾತಿ ಉಪ ಯೋಜನೆ | 187 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ––ಪರಿಶಿಷ್ಟ ಜಾತಿ ಉಪ ಯೋಜನೆ |
| 188 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ– ಗಿರಿಜನ ಉಪ ಯೋಜನೆ | 188 | ಹೈದ್ರಾಬಾದ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಯೋಜನೆ– ಗಿರಿಜನ ಉಪ ಯೋಜನೆ |
| 191<br>192<br>193 | ಇಂಧನ ಮತ್ತು ತೈಲ ವೆಚ್ಚಗಳು<br>ಲಘು ವಾಹನಗಳ ದುರಸ್ತಿ<br>ಹೊಸ ವಾಹನಗಳ ಖರೀದಿ | 195 | ಸಾರಿಗೆ ವೆಚ್ಚಗಳು |
| 140<br>150 | ಲಘು ಕಾಮಗಾರಿ<br>ದುರಸ್ತಿ, ವಿಶೇಷ ದುರಸ್ತಿ ಮತ್ತು ನವೀಕರಣ | 200 | ನಿರ್ವಹಣೆ |
| 201<br>–<br><br>211 | ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ<br>–<br><br>ಬಂಡವಾಳ ಹೂಡಿಕೆ | ––<br>202<br><br>211 | ––<br>ನಿರ್ವಹಣೆಗಾಗಿ ವೇತನ / ಮಜೂರಿ<br><br>ಬಂಡವಾಳ ಹೂಡಿಕೆ |
| 161<br>229 | ಅಲಂಕರಣಗಳು<br>ಸಾಧನ ಸಾಮಗ್ರಿಗಳು ಮತ್ತು ವಸ್ತ್ರಗಳು | 221 | ಸಾಮಗ್ರಿಗಳು ಮತ್ತು ಸರಬರಾಜುಗಳು |
| 222<br>225 | ಔಷಧಗಳು ಮತ್ತು ರಾಸಾಯನಿಕಗಳು<br>ಹೊಸ ಸರಬರಾಜುಗಳು | 222 | ಔಷಧಗಳು ಮತ್ತು ರಾಸಾಯನಿಕಗಳು |

| | | | |
|---|---|---|---|
| 230<br>234 | ಆಸ್ಪತ್ರೆ ಉಪ ಸಾಧನಗಳು<br>ಪಥ್ಯಾಹಾರ ವೆಚ್ಚಗಳು | 230<br>234 | ಆಸ್ಪತ್ರೆ ಉಪ ಸಾಧನಗಳು<br>ಪಥ್ಯಾಹಾರ ವೆಚ್ಚಗಳು |
| 127<br>128<br>129<br>241 | ಆಂತರಿಕ ಋಣ ಮರು ಸಂದಾಯಗಳು<br>ಕೇಂದ್ರ ಋಣ ಮರು ಸಂದಾಯಗಳು<br>ಮರು ಪಾವತಿಗಾಗಿ ಸಹಾಯ<br>ಬಡ್ಡಿ | 240 | ಋಣ ಸೇವೆ |
| 243<br>250 | ಬಂಡವಾಳ ಮೇಲಣ ಬಡ್ಡಿ<br>ಪಿಂಚಣಿ ವೆಚ್ಚಗಳು | 243<br>250 | ಬಂಡವಾಳ ಮೇಲಣ ಬಡ್ಡಿ<br>ಪಿಂಚಣಿ ವೆಚ್ಚಗಳು |
| 126<br>251<br>252<br>253<br>254 | ಅಂತಿಮ ರಜಾ ಸೌಲಭ್ಯಗಳು<br>ಪಿಂಚಣಿಗಳು<br>ನಿವೃತ್ತಿ ವೇತನದ ಪರಿವರ್ತಿತ ಮೌಲ್ಯ<br>ಅನುಕಂಪ ಭತ್ಯೆ<br>ಮರಣ ಹಾಗೂ ನಿವೃತ್ತಿ ಉಪದಾನ | 251 | ಪಿಂಚಣಿ ಮತ್ತು ನಿವೃತ್ತಿ ವೇತನ ಸೌಲಭ್ಯಗಳು |
| 028<br>029<br>030<br>369<br>378 | 2059 ಲೋಕೋಪಯೋಗಿಯಿಂದ ಇ.ಟಿ.ಪಿ. ವೆಚ್ಚಗಳು<br>2701 ಭಾರಿ ಮತ್ತು ಮಧ್ಯಮ ನೀರಾವರಿಯಿಂದ ಇ.ಟಿ.ಪಿ. ವೆಚ್ಚಗಳು<br>2702 ಸಣ್ಣ ನೀರಾವರಿಯಿಂದ ಇ.ಟಿ.ಪಿ. ವೆಚ್ಚಗಳು<br>ಸರ್ಕಾರಕ್ಕೆ ಅಥವಾ ಇಲಾಖೆಗಳಿಗೆ ವರ್ಗಾವಣೆಗೊಂಡ ವಜಾ ಮೊತ್ತ<br>4701 ಭಾರಿ ಮತ್ತು ನೀರಾವರಿ ಮೇಲಣ ಬಂಡವಾಳ ವೆಚ್ಚಕ್ಕೆ ವರ್ಗಾವಣೆಗೊಂಡ ವಜಾ ಮೊತ್ತ | 261 | ಆಂತರಿಕ ಲೆಕ್ಕ ವರ್ಗಾವಣೆಗಳು |
| 271 | ಸವಕಳಿ | 271 | ಸವಕಳಿ |
| 291 | ಅಮಾನತ್ತುಗಳು | 291 | ಅಮಾನತ್ತುಗಳು |
| 292 | ದಾಸ್ತಾನು ಖರ್ಚುಗಳು | 292 | ದಾಸ್ತಾನು ಖರ್ಚುಗಳು |
| 293 | ಎಂ.ಪಿ.ಡಬ್ಲ್ಯೂ.ಎ ಖರ್ಚುಗಳು | 293 | ಎಂ.ಪಿ.ಡಬ್ಲ್ಯೂ.ಎ ಖರ್ಚುಗಳು |
| 294 | ದಾಸ್ತಾನು ಜಮೆಗಳು | 294 | ದಾಸ್ತಾನು ಜಮೆಗಳು |
| 295 | ಎಂಪಿಡಬ್ಲ್ಯೂಎ ಜಮೆಗಳು | 295 | ಎಂಪಿಡಬ್ಲ್ಯೂಎ ಜಮೆಗಳು |
| 296 | ದಾಸ್ತಾನು | 296 | ದಾಸ್ತಾನು |
| 297 | ಇತರೆ ಕಾಮಗಾರಿ ಮುಂಗಡಗಳು | 297 | ಇತರೆ ಕಾಮಗಾರಿ ಮುಂಗಡಗಳು |
| 300 | ಜಿಲ್ಲಾ ಪಂಚಾಯತ್‌ಗಳಿಗೆ ಇಡಿಗಂಟು | 300 | ಜಿಲ್ಲಾ ಪಂಚಾಯತ್‌ಗಳಿಗೆ ಇಡಿಗಂಟು |
| 302 | ರಾಜ್ಯ ವಿಪತ್ತು ಉಪ ಶಮನ ನಿಧಿ ಒಟ್ಟುಗೂಡಿಸುವಿಕೆ (up front) | 302 | ರಾಜ್ಯ ವಿಪತ್ತು ಉಪ ಶಮನ ನಿಧಿ ಒಟ್ಟುಗೂಡಿಸುವಿಕೆ (up front) |
| 364 | ವಜಾ–ವಾಪಸಾತಿಗಳು | 364 | ವಜಾ–ವಾಪಸಾತಿಗಳು |
| 386 | ನಿರ್ಮಾಣ | 386 | ನಿರ್ಮಾಣ |
| 393 | ಮುಂಗಡಗಳು | 393 | ಮುಂಗಡಗಳು |
| 394 | ಸಾಲಗಳು | 394 | ಸಾಲಗಳು |
| 395 | ಸಾರ್ವಜನಿಕ ಉದ್ದಿಮೆಗಳಿಗೆ ಸಾಲಗಳು | 395 | ಸಾರ್ವಜನಿಕ ಉದ್ದಿಮೆಗಳಿಗೆ ಸಾಲಗಳು |
| 401 | ಬೆಂಗಳೂರು (ನಗರ) | 401 | ಬೆಂಗಳೂರು (ನಗರ) |

| | | | |
|---|---|---|---|
| 402 | ಬೆಂಗಳೂರು (ಗ್ರಾಮಾಂತರ) | 402 | ಬೆಂಗಳೂರು (ಗ್ರಾಮಾಂತರ) |
| 403 | ಚಿತ್ರದುರ್ಗ | 403 | ಚಿತ್ರದುರ್ಗ |
| 404 | ಕೋಲಾರ | 404 | ಕೋಲಾರ |
| 405 | ಶಿವಮೊಗ್ಗ | 405 | ಶಿವಮೊಗ್ಗ |
| 406 | ತುಮಕೂರು | 406 | ತುಮಕೂರು |
| 407 | ಮೈಸೂರು | 407 | ಮೈಸೂರು |
| 408 | ಚಿಕ್ಕಮಗಳೂರು | 408 | ಚಿಕ್ಕಮಗಳೂರು |
| 409 | ದಕ್ಷಿಣ ಕನ್ನಡ | 409 | ದಕ್ಷಿಣ ಕನ್ನಡ |
| 410 | ಹಾಸನ | 410 | ಹಾಸನ |
| 411 | ಕೊಡಗು | 411 | ಕೊಡಗು |
| 412 | ಮಂಡ್ಯ | 412 | ಮಂಡ್ಯ |
| 413 | ಬೆಳಗಾವಿ | 413 | ಬೆಳಗಾವಿ |
| 414 | ವಿಜಾಪುರ | 414 | ವಿಜಯಪುರ |
| 415 | ಧಾರವಾಡ | 415 | ಧಾರವಾಡ |
| 416 | ಉತ್ತರ ಕನ್ನಡ | 416 | ಉತ್ತರ ಕನ್ನಡ |
| 417 | ಗುಲ್ಬರ್ಗಾ | 417 | ಗುಲ್ಬರ್ಗಾ |
| 418 | ಬಳ್ಳಾರಿ | 418 | ಬಳ್ಳಾರಿ |
| 419 | ಬೀದರ್ | 419 | ಬೀದರ್ |
| 420 | ರಾಯಚೂರು | 420 | ರಾಯಚೂರು |
| 421 | ಯಾದಗಿರಿ | 421 | ಯಾದಗಿರಿ |
| 422 | ಪರಿಶಿಷ್ಟ ಜಾತಿ ಉಪಯೋಜನೆ | 422 | ಪರಿಶಿಷ್ಟ ಜಾತಿ ಉಪಯೋಜನೆ |
| 423 | ಗಿರಿಜನ ಉಪ ಯೋಜನೆ | 423 | ಗಿರಿಜನ ಉಪ ಯೋಜನೆ |
| 433 | ಪರೀಕ್ಷಾ ವೆಚ್ಚಗಳು | 433 | ಪರೀಕ್ಷಾ ವೆಚ್ಚಗಳು |
| 436 | ನಬಾರ್ಡ್ ಕಾಮಗಾರಿಗಳು | 436 | ನಬಾರ್ಡ್ ಕಾಮಗಾರಿಗಳು |
| 437 | ಪರಿಶಿಷ್ಟ ಜಾತಿ ಉಪ ಯೋಜನೆ–ನಬಾರ್ಡ್ | 437 | ಪರಿಶಿಷ್ಟ ಜಾತಿ ಉಪ ಯೋಜನೆ–ನಬಾರ್ಡ್ |
| 438 | ಗಿರಿಜನ ಉಪಯೋಜನೆ –ನಬಾರ್ಡ್ | 438 | ಗಿರಿಜನ ಉಪಯೋಜನೆ –ನಬಾರ್ಡ್ |
| 442 | ವಜಾ ವಿಶೇಷ ಘಟಕ ಯೋಜನೆ ಒಟ್ಟುಗೂಡಿಸುವಿಕೆ | 442 | ------ |
| 443 | ವಜಾ ಗಿರಿಜನ ಉಪ ಯೋಜನೆ ಒಟ್ಟುಗೂಡಿಸುವಿಕೆ | 443 | ------ |
| 451 | ದಾವಣಗೆರೆ | 451 | ದಾವಣಗೆರೆ |
| 452 | ರಾಮನಗರ | 452 | ರಾಮನಗರ |
| 453 | ಚಿಕ್ಕಬಳ್ಳಾಪುರ | 453 | ಚಿಕ್ಕಬಳ್ಳಾಪುರ |
| 456 | ಚಾಮರಾಜನಗರ | 456 | ಚಾಮರಾಜನಗರ |
| 457 | ಉಡುಪಿ | 457 | ಉಡುಪಿ |
| 461 | ಬಾಗಲಕೋಟೆ | 461 | ಬಾಗಲಕೋಟೆ |
| 462 | ಗದಗ | 462 | ಗದಗ |
| 463 | ಹಾವೇರಿ | 463 | ಹಾವೇರಿ |
| 466 | ಕೊಪ್ಪಳ | 466 | ಕೊಪ್ಪಳ |

## ಅನುಬಂಧ- 4

ಇಲಾಖೆ ...............................

ಲೆಕ್ಕ ಶೀರ್ಷಿಕೆ:...................................

| ಕ್ರ. ಸಂ. | ಅಧಿಕಾರಿಗಳ : ಸಿಬ್ಬಂದಿಯ ಹೆಸರು | ನಿವೃತ್ತಿ ಹೊಂದುವ ದಿನಾಂಕ | ಮೂಲ ವೇತನ | ತುಟ್ಟಿ ಭತ್ಯೆ | ಹಕ್ಕಿನಲ್ಲಿರುವ ರಜೆಯ ಆಧಾರದ ಮೇಲೆ ಅಂತಿಮ ರಜಾ ಸೌಲಭ್ಯಗಳು |
|---|---|---|---|---|---|
| | | | | | |

# ಅನುಬಂಧ –5

## ( ವಿಶ್ವ ವಿದ್ಯಾನಿಲಯಗಳು ಪ್ರತ್ಯೇಕ ಮಾಹಿತಿ ಸಲ್ಲಿಸುವುದು)

(ಲಕ್ಷ. ರೂ. ಗಳಲ್ಲಿ)

| ವಿಶ್ವ ವಿದ್ಯಾನಿಲಯಗಳ ಹೆಸರು | ಲೆಕ್ಕ ಶೀರ್ಷಿಕೆ | 2016–17ನೇ ಸಾಲಿನ ಲೆಕ್ಕಗಳು | | | 2016–17ನೇ ಸಾಲಿನಲ್ಲಿ ಬಂದಿರುವ ವಾಸ್ತವಿಕ ಆಂತರಿಕ ಸಂಪನ್ಮೂಲಗಳು | 2017–18ನೇ ಸಾಲಿನ ಆಯವ್ಯಯ | | | 2018–19ನೇ ಸಾಲಿಗಾಗಿ ವಿಶ್ವ ವಿದ್ಯಾನಿಲಯಗಳ ಕೋರಿಕೆ | | | 2018–19ನೇ ಸಾಲಿಗಾಗಿ ಆಂತರಿಕ ಸಂಪನ್ಮೂಲಗಳ ಅಂದಾಜು | ಷರಾ |
|---|---|---|---|---|---|---|---|---|---|---|---|---|---|
| | | ವೇತನ | ಪಿಂಚಣಿ | ಒಟ್ಟು | | ವೇತನ | ಪಿಂಚಣಿ | ಒಟ್ಟು | ವೇತನ | ಪಿಂಚಣಿ | ಒಟ್ಟು | | |
| **1** | **2** | **3** | **4** | **5=3+4** | **6** | **7** | **8** | **9** | **10** | **11** | **12=10+11** | **13** | **14** |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| ಟಿಪ್ಪಣಿ:– ಈ ಮಾಹಿತಿಯನ್ನು ವಿವರವಾದ ಮಾಹಿತಿಯ ಜೊತೆಗೆ ಸಲ್ಲಿಸತಕ್ಕದ್ದು. | | | | | | | | | | | | | |

**ಅನುಬಂಧ–6 (ಎ)**

# ಸ್ವಾಯತ್ತ ಸಂಸ್ಥೆಗಳ ವೇತನ ಅಂದಾಜುಗಳು

**ಸಂಸ್ಥೆಯ ಹೆಸರು** (ಲಕ್ಷ. ರೂ. ಗಳಲ್ಲಿ)

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆ | | ಹುದ್ದೆಗಳ ಸಂಖ್ಯೆ | | | ವೇತನ | | | ಇತರೇ ಭತ್ಯೆಗಳು | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | ಅಧಿಕಾರಿಗಳು | ಸಿಬ್ಬಂದಿ | ಅಧಿಕಾರಿಗಳು | ಸಿಬ್ಬಂದಿ | ಒಟ್ಟು | ತುಟ್ಟಿ ಭತ್ಯೆ | ಮನೆ ಬಾಡಿಗೆ ಭತ್ಯೆ | ನಗರ ಪರಿಹಾರ ಭತ್ಯೆ | ಎನ್.ಪಿ.ಎ | ಇ.ಭ/ತಾ.ಪ. | ವೈದ್ಯಕೀಯ ಭತ್ಯೆ | ಶುಭ್ರ ಭತ್ಯೆ | ಶಿಷ್ಯ ವೇತನ | ಒಟ್ಟು |
| **1** | **2** | | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** | **16** | **17** |
| 1 | | **ಬೋಧಕ ಎಐಸಿಟಿಇ ವೇತನ ಮಾತ್ರ** | ಮಂಜೂರಾತಿ | | | | | | | | | | | | | | |
| | | | ಕಾರ್ಯನಿರತ | | | | | | | | | | | | | | |
| | | | ಖಾಲಿ | | | | | | | | | | | | | | |
| | | **ಬೋಧಕ ರಾಜ್ಯ ವೇತನ ಮಾತ್ರ** | ಮಂಜೂರಾತಿ | | | | | | | | | | | | | | |
| | | | ಕಾರ್ಯನಿರತ | | | | | | | | | | | | | | |
| | | | ಖಾಲಿ | | | | | | | | | | | | | | |
| | | **ಬೋಧಕೇತರ** | ಮಂಜೂರಾತಿ | | | | | | | | | | | | | | |
| | | | ಕಾರ್ಯನಿರತ | | | | | | | | | | | | | | |
| | | | ಖಾಲಿ | | | | | | | | | | | | | | |
| | **ಒಟ್ಟು** | | | | | | | | | | | | | | | | |
| 2 | ಆಂತರಿಕ ಸಂಪನ್ಮೂಲಗಳು | | | | | | | | | | | | | | | | |
| | | **ಬೋಧಕ** | ಮಂಜೂರಾತಿ | | | | | | | | | | | | | | |
| | | | ಕಾರ್ಯನಿರತ | | | | | | | | | | | | | | |
| | | | ಖಾಲಿ | | | | | | | | | | | | | | |
| | | **ಬೋಧಕೇತರ** | ಮಂಜೂರಾತಿ | | | | | | | | | | | | | | |
| | | | ಕಾರ್ಯನಿರತ | | | | | | | | | | | | | | |
| | | | ಖಾಲಿ | | | | | | | | | | | | | | |
| | | **ಮೂಲ ವೇತನೊಂದಿಗೆ ಪಿಂಚಣಿದಾರರ ಸಂಖ್ಯೆ** | | | | | | | | | | | | | | | |
| | **ಒಟ್ಟು** | | | | | | | | | | | | | | | | |
| | | | | | | | | | | | | | | | | | |

## ಅನುಬಂಧ–6(ಬಿ)

## ಸ್ವಾಯತ್ತ ಸಂಸ್ಥೆಗಳ ವೇತನೇತರ ಅಂದಾಜುಗಳು

ಲಕ್ಷ. ರೂ. ಗಳಲ್ಲಿ

| ಕ್ರ. ಸಂ | ಸಂಸ್ಥೆಯ ಹೆಸರು | ಗುತ್ತಿಗೆ/ಬಾಹ್ಯ ಮೂಲಗಳು | | ಔಷಧಗಳು ಮತ್ತು ಔಷಧಿಗಳಿಗೆ ಸಂಬಂಧಿಸಿದ ಬಾಬ್ತುಗಳಿಗಾಗಿ ಬೇಕಾಗುವ ಮೊತ್ತ | ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಗಳನ್ನು ಒಳಗೊಂಡಂತೆ ನಿರ್ವಹಣೆಗಾಗಿ ಬೇಕಾಗುವ ಮೊತ್ತ | ಆಶಡಳಿತಾತ್ಮಕ ಅನುಮೋದನೆಯನ್ನು ಪಡೆದಿರುವ ಉಪಕರಣಗಳಿಗಾಗಿ ಬೇಕಾಗುವ ಮೊತ್ತ | ಒಟ್ಟು |
|---|---|---|---|---|---|---|---|
| | | ಸಂಖ್ಯೆ | ಮೊತ್ತ | | | | |
| 1 | 2 | 3 | 4 | 5 | 6 | 7 | 8 = 4 +5+6+7 |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |